ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1) ಬಂದಿದೆ.

2) ಗ್ರಾಮಾಂತರ ಪ್ರದೇಶದಲ್ಲಿನ ಜನರು ತಮ್ಮ ಆಹಾರ ಧಾನ್ಯಗಳನ್ನು ಬೆಳೆಯುವವರಾದ್ದರಿಂದ ಅವರು ಪಟ್ಟಣ ಪ್ರದೇಶದ ಜನರಂತೆ ಪೂರ್ತಿಯಾಗಿ ಪಡಿತರ ವಸ್ತುಗಳನ್ನು ಅವಲಂಬಿಸಿರುವುದಿಲ್ಲ. ಆದ್ದರಿಂದ ಪಟ್ಟಣ ಪ್ರದೇಶಕ್ಕೆ ಗ್ರಾಮಾಂತರ ಪ್ರದೇಶಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯ ನೀಡಲಾಗುತ್ತಿದೆ. ಇದು ಅಲ್ಲದೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ 48,000 ಮೆ.ಟ. ಅಕ್ಕಿ 40,000 ಮೆ.ಟ. ಗೋಧಿ ಮತ್ತು 17,777 ಮೆ.ಟ. ಸಕ್ಕರೆಯನ್ನು ಮಾತ್ರ ಪಡೆಯುತ್ತದೆ. ಆದರೆ ವಾಸ್ತವಿಕವಾಗಿ ರಾಜ್ಯಕ್ಕೆ 75,000 ಮೆ.ಟ. ಅಕ್ಕಿ, 50,000 ಮೆ.ಟ.ಗೋಧಿ 20,000 ಮೆ.ಟ. ಸಕ್ಕರೆ 11,000 ಮೆಟನ್ ಪಾಮೋಲಿವ್ ಎಣ್ಣೆ ಬೇಕಾಗುತ್ತದೆ. ಈ ರೀತಿ ರಾಜ್ಯದ ಅವಶ್ಯಕತೆಗನುಗುಣವಾಗಿ ಕೇಂದ್ರವು ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದಲ್ಲಿ ಈ ತಾರತಮ್ಯವನ್ನು ಕಡಿಮೆ ಮಾಡಿ ಆಹಾರ ಧಾನ್ಯ ವಿತರಣೆ ಮಾಡಲಾಗುವುದು.

**ಚಿಕ್ಕೋಡಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ**

3369 - ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಚಿಕ್ಕೋಡಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ (ನಿ) ನಿಪ್ಪಾಣಿ ಇದರ ಅಧೀನದಲ್ಲಿರುವ ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಕೊಟ್ಟ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?*

*ಆ) ಹಾಗಿದ್ದಲ್ಲಿ ಸರ್ಕಾರವು ಸದರಿ ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಮಾರಾಟ ಮಾಡಲು ಅನುಮತಿ ನೀಡಿರುವುದು ನಿಜವೇ?*

ಶ್ರೀ ಎಸ್.ಆರ್. ಮೋರೆ. (ಸಹಕಾರ ರಾಜ್ಯ ಸಚಿವರು)

ಅ) ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಆಧಾರದ ಮೇಲೆ ನೀಡಿರುವದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಲ್ಲ.

**ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜಿನ ಬಗ್ಗೆ.**

3464 - ಶ್ರೀ ಎಂ. ಭಕ್ತವಚಲಂ (ಕೆ.ಜಿ.ಎಫ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*1) ಕೆ.ಜಿ.ಎಫ್.ನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಎಲ್ಲಾ ಪಿ.ಯು.ಸಿ. ತರಗತಿಗಳಲ್ಲಿ ಇಂಗ್ಲಿಷ್ ಬೋದನೆಗೆ ಪ್ರತಿ ತರಗತಿಗೆ ನಿಗದಿಪಡಿಸಿದ್ದ ನಾಲ್ಕು ಘಂಟೆಗಳ ಕಾರ್ಯಭಾರವನ್ನು ವಾರಕ್ಕೆ ಮೂರು ಘಂಟೆಗಳಿಗೆ 1990-91 ಮತ್ತು 1991-92ನೇ ಸಾಲಿನಲ್ಲಿ ಕಡಿಮೆ ಮಾಡಿರುವುದು ವಾಸ್ತವಿಕ ಸಂಗತಿಯೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)